


'ಅನುಭವ ಮಂಟಪ' ಹಾಗೂ ಬಸವಣ್ಣನ ಆದರ್ಶಗಳನ್ನು ದೇಶಕ್ಕೆ ಸಾರುವ ಸ್ತಬ್ಧಚಿತ್ರ

## ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಹೆಜ್ಜೆಗುರುತು

# ಜನ ಗಣ ಕನ್ನಡ ಮನ

**ದೇಶದ ಸಾಂಸ್ಕೃತಿಕ ವೈಭವ ಹಾಗೂ ಸೇನಾಶಕ್ತಿಯನ್ನು ಪ್ರದರ್ಶಿಸುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರಗಳು ಭಾಗವಹಿಸತೊಡಗಿ ಐವತ್ತು ವರ್ಷಗಳಾದವು. ಈ ಅರ್ಧ ಶತಮಾನದ ಪಯಣದಲ್ಲಿ ಕರ್ನಾಟಕದ ಕಲಾಕೃತಿಗಳು ಅವಕಾಶ ಸಿಕ್ಕಾಗಲೆಲ್ಲ ದೇಶದ ಗಮನಸೆಳೆದಿವೆ, ಪುರಸ್ಕಾರಗಳಿಗೂ ಪಾತ್ರವಾಗಿವೆ.**

■ ಎನ್‌. ಜಗನ್ನಾಥ ಪ್ರಕಾಶ್

ದೆಹಲಿಯ ರಾಜಪಥದಲ್ಲಿ ವಿಜೃಂಭಣೆಯಿಂದ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಹಿರಿಮೆ ಗರಿಮೆಗಳನ್ನು ಅನಾವರಣ ಮಾಡುವ ವಾರ್ಷಿಕ ಸಂಪ್ರದಾಯಕ್ಕೀಗ ಐವತ್ತು ವರ್ಷ.

ಬಹುತ್ವ ಭಾರತದ ಸಂಸ್ಕೃತಿ, ಪರಂಪರೆ, ನೃತ್ಯ ಸಂಗೀತ, ಮಿಲಿಟರಿ ಶಕ್ತಿಯ ಜೊತೆಗೆ ಹಲವು ಕಲಾಪ್ರಕಾರಗಳನ್ನು ಹೆಮ್ಮೆಯಿಂದ ಪ್ರದರ್ಶಿಸಲಿಕ್ಕೆ, ದೇಶಕ್ಕೆ ಪರಿಚಯಿಸಲಿಕ್ಕೆ ಗಣರಾಜ್ಯೋತ್ಸವದ ಪರೇಡ್ ಅತ್ಯುತ್ತಮ ವೇದಿಕೆ. ಈ ಪರೇಡ್‌ನಲ್ಲಿ 'ಕರ್ನಾಟಕದ ಸ್ತಬ್ಧಚಿತ್ರಗಳ ಪಯಣ' ಆರಂಭವಾದುದು ಐವತ್ತು ವರ್ಷಗಳ ಹಿಂದೆ, 1972ರಿಂದ.

ಕೋಟ್ಯಂತರ ಜನ ಟೀವಿ ವಾಹಿನಿಗಳ ಮೂಲಕ ನೇರಪ್ರಸಾರದಲ್ಲಿ ವೀಕ್ಷಿಸುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸುವುದು ಎಲ್ಲ ರಾಜ್ಯಗಳಿಗೆ ಹೆಮ್ಮೆಯ ಸಂಗತಿ. ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ಸ್ತಬ್ಧಚಿತ್ರಗಳು ಹಾಗೂ ರಂಗುರಂಗಿನ ಉಡುಪು ತೊಟ್ಟ ಕಲಾವಿದರು, ಮನಕ್ಕೆ ಮುದ ನೀಡುವ ಸಂಗೀತ – ಇವೆಲ್ಲವೂ ಮೇಳೈಸಿದ ಸಾಲು ಸಾಲು ಚಿತ್ರಗಳನ್ನು ನೋಡಿದರೆ 'ಬಹುತ್ವ ಭಾರತ'ವೇ ಜೀವತಳೆದು ನಮ್ಮೆದುರು ಅನಾವರಣಗೊಂಡಂತೆ ಭಾಸವಾಗುತ್ತದೆ.

ಅಂತರರಾಷ್ಟ್ರೀಯ ಮಟ್ಟದಲ್ಲೂ ಗಮನಸೆಳೆಯುವ ಪರೇಡ್‌ನಲ್ಲಿ ಕನ್ನಡ ಮತ್ತು ಕರ್ನಾಟಕವನ್ನು ಪ್ರತಿನಿಧಿಸುವ ಕೆಲಸ ಐದು ದಶಕಗಳಿಂದ ಸಮರ್ಥವಾಗಿ ನಡೆಯುತ್ತಿದೆ. ಪರೇಡ್‌ನಲ್ಲಿ ಭಾಗವಹಿಸುವ ಅವಕಾಶ ದೊರೆಯುವುದು ಸುಲಭದ ಸಂಗತಿಯಲ್ಲ. ಸಮಯ ಮತ್ತು ಸ್ತಬ್ಧಚಿತ್ರಗಳ ಸಂಖ್ಯೆಗೆ ಮಿತಿ